ದಿನಾಂಕ 12.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ- 1ನೇ ಪ್ರತಿವಾದಿ ಪರ ವಕೀಲರಾದ ಶ್ರೀಮತಿ ಬಿ.ಯು.ಪಿ ರವರಿಂದಃ-

ನಾನು ಚೆಪ್ಪುಡೀರಾ ಕುಟುಂಬಕ್ಕೆ ಸೇರಿದವಳು. ನನ್ನನ್ನು ತೀತಮಾಡ ಕುಟಂಬಕ್ಕೆ ವಿವಾಹ ಮಾಡಿಕೊಡಲಾಗಿರುತ್ತದೆ. ನಾನು ನನ್ನ ತಂದೆಗೆ ಸೇರಿದ ಪಿತ್ರಾರ್ಜಿತ ಆಸ್ತಿಗಳಲ್ಲಿ ಭಾಗಾಂಶವನ್ನು ಕೋರಿ ದಾವೆಯನ್ನು ಹೂಡಿರುತ್ತೇನೆ. ನನ್ನ ಅಜ್ಜನಿಗೆ ಕಾರ್ಯಪ್ಪ, ಬಿದ್ದಪ್ಪ, ಪೂಣಚ್ಚ, ಸುಬ್ಬಯ್ಯ ಮತ್ತು ನಾಚಪ್ಪ ಎಂಬ 5 ಜನ ಗಂಡು ಮತ್ತು ರೂಬಿ ಎಂಬ ಹೆಣ್ಣು ಮಗಳು ಇದ್ದಳು. ನನ್ನ ತಂದೆಯ ಹೆಸರು ಬಿದ್ದಪ್ಪ, ನಾನು, 1 ಮತ್ತು 2 ನೇ ವಾದಿ ಹಾಗೂ 1 ನೇ ಪ್ರತಿವಾದಿ ಅವರ ಮಕ್ಕಳು.

ನನ್ನ ತಂದೆ ಮತ್ತು ಅವರ ಸಹೋದರರು ಕುಟುಂಬದ ಸ್ವತ್ತುಗಳನ್ನು ಬಾಯಿಮಾತಿನ ಮೂಲಕ ವಿಭಾಗ ಮಾಡಿಕೊಂಡಿದ್ದರು. ನಾನು ವಾದಪತ್ರದಲ್ಲಿ ನನ್ನ ತಂದೆಯ ಸಹೋದರರು ಮತ್ತು ಸಹೋದರಿಯ ಬಗ್ಗೆ ತಿಳಿಸಿರುವುದಿಲ್ಲ ಎಂದರೆ ಸರಿ. ನಾನು ನಿ.ಪಿ 1 ದಾಖಲೆಯನ್ನು ನನ್ನ ಅನುಕೂಲಕ್ಕೆ ತಕ್ಕಂತೆ ತಯಾರಿಸಿ, ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**1**ನೇ ಪ್ರತಿವಾದಿಯು **2019**ರಲ್ಲಿ ಒಂದು ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು **1**ನೇ ಪ್ರತಿವಾದಿಯು ನಮಗೆ ಒತ್ತಾಯ ಮಾಡಿ, ಕ್ರಯಪತ್ರಕ್ಕೆ ಸಹಿ ಪಡೆದುಕೊಂಡು, ನನಗೆ ಮತ್ತು **1** ಮತ್ತು **2** ನೇ ವಾದಿಗಳಿಗೆ ರೂ. **2,40,000/-** ಸಾವಿರ ಹಣವನ್ನು ನೀಡಿರುತ್ತಾನೆ ಎಂದು ಉತ್ತರಿಸಿರುತ್ತಾರೆ. ಸದರಿ ಹಣವನ್ನು ನಾವು ಮೂರು ಜನ ಸಹೋದರಿಯರು ಸಮನಾಗಿ ಹಂಚಿಕೊಂಡಿರುತ್ತೇವೆ. ಕ್ರಯಪತ್ರದಲ್ಲಿ ನಮ್ಮ ಮತ್ತು **1**ನೇ ಪ್ರತಿವಾದಿಯ ನಡುವೆ ಆಸ್ತಿಗಳು ವಿಭಾಗವಾಗಿರುವ ಬಗ್ಗೆ ನಮೂದಿಸಲಾಗಿದೆ ಎಂದರೆ ಸರಿಯಲ್ಲ.

ದಾವಾ ಅನುಸೂಚಿಯ **2**ನೇ ಸ್ವತ್ತಿನ ಮಾರಾಟಕ್ಕೆ ಸಂಬಂಧಿಸಿದಂತೆ ಕ್ರಯದ ಕರಾರುಪತ್ರವಾಗಿದ್ದು, ಸದರಿ ಕರಾರುಪತ್ರದಡಿ ನಾವು **1**ನೇ ಪ್ರತಿವಾದಿಯಿಂದ ಸ್ವಲ್ಪ ಹಣವನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ದಿನಾಂಕ **04.10.2024** ರ ಕ್ರಯಪತ್ರದಡಿ ನನ್ನ ಭಾಗಾಂಶದ ಹಣವನ್ನು **1**ನೇ ಪ್ರತಿವಾದಿಯಿಂದ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮತ್ತು **1** ಹಾಗೂ **2** ನೇ ವಾದಿಗಳು ನಮ್ಮ ಭಾಗಾಂಶದ ಹಕ್ಕಿಗೆ ಸಂಬಂಧಿಸಿದಂತೆ, **1**ನೇ ಪ್ರತಿವಾದಿಯಿಂದ ಹಣವನ್ನು ಪಡೆದುಕೊಂಡು, ಕ್ರಯಪತ್ರಕ್ಕೆ ಒಪ್ಪಿಗೆಯನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಭಾಗಾಂಶದ ರೂಪದಲ್ಲಿ **1**ನೇ ಪ್ರತಿವಾದಿಯಿಂದ

ಹಣವನ್ನು ಪಡೆದುಕೊಂಡಿರುವುದರಿಂದ ನಾವು ಈ ದಾವೆಯಲ್ಲಿ ಕೋರಿರುವಂತಹ ಪರಿಹಾರವನ್ನು ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ:-** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.